**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ ಸಿ ಸಂಃ 1021-2019**

| | | |
|---|---|---|
| ಸಾಕ್ಷಿಯ ಹೆಸರುಃ | ಮೀನಾಕ್ಷಿ | ಪ್ರಾ.ಸಾಃಃ 01 |
| ತಂದೆ/ಗಂಡನ ಹೆಸರುಃ | ಲೇಟ್ ಗಣೇಶ್ | ಚಾಸಾಃಃ 01 |
| ವಯಸ್ಸುಃ | ವರ್ಷ 45 | ಪ್ರಮಾಣೀಕರಿಸಿದ ದಿಃ 21.01.2020 |
| ಉದ್ಯೋಗಃ | ಗೃಹಿಣಿ | |
| ವಾಸ ಸ್ಥಳಃ | ಸೂಳೆಕೋಟೆ ಗ್ರಾಮ | ಪಿರಿಯಾಪಟ್ಟಣ ತಾಲ್ಲೂಕು |

**ಮುಖ್ಯ ವಿಚಾರಣೆಃ ಹಿಸಸಅ ರಿಂದಃ**

ಆರೋಪಿಗಳ ಪರಿಚಯವಿದೆ. ಚಾಸಾ-02 ನನ್ನ ಸೊಸೆ. ಚಾಸಾ-03 ನನ್ನ ಭಾವ. ಚಾಸಾ-04 ನನ್ನ ಸಂಬಂಧಿಕರು. ಆರೋಪಿಗಳು ನನ್ನ ದೂರ ಸಂಬಂಧಿಕರು. ನಮಗೂ ಹಾಗೂ ಆರೋಪಿಗಳ ನಡುವೆ ಜಮೀನಿನ ವ್ಯಾಜ್ಯವಿರುತ್ತದೆ. ದಿನಾಂಕಃ 11.04.2017 ರಂದು ಮಃ12 ಗಂಟೆ ಸಮಯದಲ್ಲಿ ನಾನು ಹಾಗೂ ಚಾಸಾ-02 ಮತ್ತು 03 ರವರು ಮನೆಯ ಬಳಿ ಮಾತನಾಡುತ್ತಾ ಕುಳಿತಿರುವಾಗ ಈ ಕೇಸಿನ ಆರೋಪಿಗಳು ಒಂದು ಕಪ್ಪು ಜೀಪಿನಲ್ಲಿ ನಮ್ಮ ಮನೆಯ ಬಳಿ ಬಂದು, 1 ಮತ್ತು 2 ನೇ ಆರೋಪಿಗಳು ಬೋವರ್ಸಿ ಮುಂಡೇರಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ , ಮನೆ ನಮಗೆ ಸೇರಿದ್ದು, ಮನೆಯನ್ನು ಖಾಲಿ ಮಾಡಿ ಎಂದು ಬೈದು, ಆಗ ನಾನು ಹಾಗೂ ಚಾಸಾ-02 ರವರು ಸದರಿ ಜಾಗ ನಮಗೆ ಸೇರಿದು ಕೋರ್ಟ್ ನ ಮುಖಾಂತರ ಜಾಗ ನಮ್ಮದಾಗಿದ್ದು, ಈ ರೀತಿ ಯಾಕೆ ಬೈದು ಗಲಾಟೆ ಮಾಡುತ್ತಿದ್ದೀರಿ ನಾವೇಕೆ ಖಾಲಿ ಮಾಡಬೇಕು ಎಂದಿದ್ದಕ್ಕೆ 4 ನೇ ಆರೋಪಿ ದೊಣ್ಣೆಯಿಂದ ಬಲಗಾಲು ಹಾಗೂ ಬಲಕೈಗೆ ಹೊಡೆದು ಗಾಯಪಡಿಸಿರುತ್ತಾನೆ.

ಚಾಸಾ-02 ರವರು ಜಗಳವನ್ನು ಬಿಡಿಸಲು ಬಂದಾಗ 1 ರಿಂದ 3 ನೇ ಆರೋಪಿಗಳು ಕೈಗಳಿಂದ ಆಕೆಯನ್ನು ಹಿಡಿದು ಎಳೆದಾಡಿ ಕಾಲಿನಿಂದ ಹೊಟ್ಟೆಗೆ ಒದ್ದು, ತಿಪ್ಪೆಗುಂಡಿಗೆ ನೂಕಿರುತ್ತಾರೆ. ಆಕೆ ಎದ್ದು ಸುಧಾರಿಸಿಕೊಳ್ಳುವಾಗ 1 ಮತ್ತು 2 ನೇ ಆರೋಪಿಗಳು ಆಕೆಯ ಎದೆಯ ಭಾಗಕ್ಕೆ ಕೈ ಹಾಕಿ, ಆಕೆ ಧರಿಸಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಹರಿದು ಹಾಕಿ, ಆಕೆಗೆ ನಡುರಸ್ತೆಯಲ್ಲಿ ಮಾನಭಂಗ ಮಾಡಿರುತ್ತಾರೆ. ಆಗ ಚಾಸಾ-03 ರವರು ಅಲ್ಲಿಗೆ ಬಂದು ಈಗಾಗಲೇ ಆಕೆ ಅನಾರೋಗ್ಯದಿಂದ ಬೈಯುತ್ತಿದ್ದು ಆಕೆಗೆ ಯಾಕೆ ತೊಂದರೆ ಕೊಡುತ್ತಿದ್ದೀರಾ ಎಂದಿದ್ದಕ್ಕೆ ಅವರಿಗೂ ಸಹ 5 ಮತ್ತು 6 ನೇ ಆರೋಪಿಗಳು ಚಿಕ್ಕ ಕಲ್ಲುಗಳನ್ನು ತೆಗೆದು ಚಾಸಾ-03 ರವರಿಗೆ ಸೊಂಟ, ಕೈ , ಕಾಲು ಮತ್ತು ಬೆರಳಿಗೆ ಹೊಡೆದು ಗಾಯಪಡಿಸಿರುತ್ತಾರೆ.

ನಂತರ ಚಾಸಾ-04 ರವರು ಜಗಳನ್ನು ಬಿಡಿಸಲು ಬಂದಾಗ 3, 5 ಮತ್ತು 6 ನೇ ಆರೋಪಿಗಳು ಕೈಗಳಿಂದ ಅವರ ಶರೀರಕ್ಕೆ ಹೊಡೆದಿರುತ್ತಾರೆ. ಆಗ ಚಾಸಾ-5 ಮತ್ತು 06 ರವರುಗಳು ಬಂದು ಜಗಳ ಬಿಡಿಸಿರುತ್ತಾರೆ. ಆಗ ಆರು ಜನ ಆರೋಪಿಗಳು ತಮ್ಮ ಕೈಯಲ್ಲಿದ್ದ ದೊಣ್ಣೆ ಹಾಗೂ ಕಲ್ಲುಗಳನ್ನು ಅಲ್ಲೇ

ಬೀಳಿಸಿ, ನೀವು ಜಾಗವನ್ನು ಖಾಲಿ ಮಾಡದೇ ಹೋದರೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕ ಒಡ್ಡಿ ಹೋಗಿರುತ್ತಾರೆ.

ನಂತರ ಚಾಸಾ-04 ರವರು, ನನ್ನನ್ನು , ಚಾಸಾ-02 ಮತ್ತು 03 ರವರನ್ನು ಕುಶಾಲನಗರ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಗಾಗಿ ದಾಖಲುಮಾಡಿರುತ್ತಾರೆ. ಸದರಿ ದಿನ ನಾನು ಹೇಳಿಕೆ ಕೊಡದ ಸ್ಥಿತಿಯಲ್ಲಿ ಇರದೇ ಇದ್ದ ಕಾರಣ, ಪೊಲೀಸ್‌ರು ಎರಡು ದಿನಗಳ ನಂತರ ಬರುವುದಾಗಿ ತಿಳಿಸಿ ಹೋಗಿರುತ್ತಾರೆ. ಅಂತೆಯೇ ಎರಡು ದಿನಗಳ ನಂತರ ಆಸ್ಪತ್ರೆಗೆ ಬಂದು ನಮ್ಮ ಹೇಳಿಕೆಯನ್ನು ಪಡೆದುಕೊಂಡು ಹೋಗಿರುತ್ತಾರೆ.

ಸಾಕ್ಷಿಯು ತನ್ನ ಹೇಳಿಕೆ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.01 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.01(ಎ) ಎಂದು ಗುರುತಿಸಲಾಯಿತು. ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ ದೊಣ್ಣೆ, ಎರಡು ಕಲ್ಲುಗಳು ಹಾಗೂ ನೈಟಿಯನ್ನು ನೋಡಿ ಗುರುತಿಸಿದು ಅವುಗಳನ್ನು ಕ್ರಮವಾಗಿ ಮು.ಮಾ.01 ರಿಂದ 04 ಎಂದು ಗುರುತಿಸಲಾಯಿತು. ಆರೋಪಿಗಳು ಕೃತ್ಯ ಸ್ಥಳಕ್ಕೆ ಬಂದಿದ್ದ ಕಪ್ಪು ಬೊಲೇರೋ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳನ್ನು ಈ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಕೆ.ಆರ್.ವಿ. ವಕೀಲರಿಂದಃ</u>**

**ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

**<u>ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**ಹೆಃಸಿ.ನ್ಯಾ. ಹಾಗೂ ಪ್ರ.ವ.ನ್ಯಾ.ದಂ.**
**ಪಿರಿಯಾಪಟ್ಟಣ.**

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ ಸಿ ಸಂಃ 1021-2019**

| | | |
|---|---|---|
| ಸಾಕ್ಷಿಯ ಹೆಸರುಃ | ವಿಜಯಲಕ್ಷ್ಮಿ | ಫ್ರಾಸಾಃಃ 02 |
| ತಂದೆ/ಗಂಡನ ಹೆಸರುಃ | ಜಸವರಾಜು | ಚಾಸಾಃಃ 02 |
| ವಯಸ್ಸುಃ | ವರ್ಷ 30 | ಪ್ರಮಾಣೀಕರಿಸಿದ ದಿಃ 21.01.2020 |
| ಉದ್ಯೋಗಃ | ಗೃಹಿಣಿ | |
| ವಾಸ ಸ್ಥಳಃ | ಸೂಳೆಕೋಟೆ ಗ್ರಾಮ | ಪಿರಿಯಾಪಟ್ಟಣ ತಾಲ್ಲೂಕು |

**ಮುಖ್ಯ ವಿಚಾರಣೆಃ ಹಿಸಸಅ ರಿಂದಃ**

ಆರೋಪಿಗಳ ಪರಿಚಯವಿದೆ. ಫ್ರಾಸಾ-01 ನನ್ನ ಅತ್ತೆ. ಚಾಸಾ-03 ಮತ್ತು ಚಾಸಾ-04 ನನ್ನ ಸಂಬಂಧಿಕರು. ಆರೋಪಿಗಳು ನನ್ನ ದೂರ ಸಂಬಂಧಿಕರು. ನಮಗೂ ಹಾಗೂ ಆರೋಪಿಗಳ ನಡುವೆ ಜಮೀನಿನ ವ್ಯಾಜ್ಯವಿರುತ್ತದೆ. ದಿನಾಂಕಃ 11.04.2017 ರಂದು ಮಃ12 ಗಂಟೆ ಸಮಯದಲ್ಲಿ ನಾನು, ಫ್ರಾಸಾ-01 ಮತ್ತು 03 ರವರು ಮನೆಯ ಬಳಿ ಮಾತನಾಡುತ್ತಾ ಕುಳಿತಿರುವಾಗ ಈ ಕೇಸಿನ ಆರೋಪಿಗಳು ಒಂದು ಕಪ್ಪು ಜೀಪಿನಲ್ಲಿ ನಮ್ಮ ಮನೆಯ ಬಳಿ ಬಂದು, 1 ಮತ್ತು 2 ನೇ ಆರೋಪಿಗಳು ಬೋವರ್ಸಿ ಮುಂಡೇರಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ , ಮನೆ ನಮಗೆ ಸೇರಿದ್ದು, ಮನೆಯನ್ನು ಖಾಲಿ ಮಾಡಿ ಎಂದು ಬೈದು, ಆಗ ಫ್ರಾಸಾ-01 ಹಾಗೂ ನಾನು ಸದರಿ ಜಾಗ ನಮಗೆ ಸೇರಿದು ಕೊರ್ಟ್ ನ ಮುಖಾಂತರ ಜಾಗ ನಮ್ಮದಾಗಿದ್ದು, ಈ ರೀತಿ ಯಾಕೆ ಬೈದು ಗಲಾಟೆ ಮಾಡುತ್ತಿದ್ದೀರಿ ನಾವೇಕೆ ಖಾಲಿ ಮಾಡಬೇಕು ಎಂದಿದ್ದಕ್ಕೆ 4 ನೇ ಆರೋಪಿ ದೊಣ್ಣೆಯಿಂದ ಫ್ರಾಸಾ-01 ರವರ ಬಲಗಾಲು ಹಾಗೂ ಬಲಕೈಗೆ ಹೊಡೆದು ಗಾಯಪಡಿಸಿರುತ್ತಾನೆ.

ನಾನು ಜಗಳವನ್ನು ಬಿಡಿಸಲು ಬಂದಾಗ 1 ರಿಂದ 3 ನೇ ಆರೋಪಿಗಳು ಕೈಗಳಿಂದ ನನ್ನನ್ನು ಹಿಡಿದು ಎಳೆದಾಡಿ ಕಾಲಿನಿಂದ ಹೊಟ್ಟೆಗೆ ಒದ್ದು, ತಿಪ್ಪೆಗುಂಡಿಗೆ ನೂಕಿರುತ್ತಾರೆ. ನಾನು ಎದ್ದು ಸುಧಾರಿಸಿಕೊಳ್ಳುವಾಗ 1 ಮತ್ತು 2 ನೇ ಆರೋಪಿಗಳು ನನ್ನ ಎದೆಯ ಭಾಗಕ್ಕೆ ಕೈ ಹಾಕಿ, ನಾನು ಧರಿಸಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಹರಿದು ಹಾಕಿ, ನನಗೆ ನಡುರಸ್ತೆಯಲ್ಲಿ ಮಾನಭಂಗ ಮಾಡಿರುತ್ತಾರೆ. ಆಗ ಚಾಸಾ-03 ರವರು ಅಲ್ಲಿಗೆ ಬಂದು ಈಗಾಗಲೇ ಆಕೆ ಅನಾರೋಗ್ಯದಿಂದ ಬೈಯುತ್ತಿದ್ದು ಆಕೆಗೆ ಯಾಕೆ ತೊಂದರೆ ಕೊಡುತ್ತಿದ್ದೀರಾ ಎಂದಿದ್ದಕ್ಕೆ ಅವರಿಗೂ ಸಹ 5 ಮತ್ತು 6 ನೇ ಆರೋಪಿಗಳು ಚಿಕ್ಕ ಕಲ್ಲುಗಳನ್ನು ತೆಗೆದು ಚಾಸಾ-03 ರವರಿಗೆ ಸೊಂಟ, ಕೈ , ಕಾಲು ಮತ್ತು ಬೆರಳಿಗೆ ಹೊಡೆದು ಗಾಯಪಡಿಸಿರುತ್ತಾರೆ.

ನಂತರ ಚಾಸಾ-04 ರವರು ಜಗಳನ್ನು ಬಿಡಿಸಲು ಬಂದಾಗ 3, 5 ಮತ್ತು 6 ನೇ ಆರೋಪಿಗಳು ಕೈಗಳಿಂದ ಅವರ ಶರೀರಕ್ಕೆ ಹೊಡೆದಿರುತ್ತಾರೆ. ಆಗ ಚಾಸಾ-5 ಮತ್ತು 06 ರವರುಗಳು ಬಂದು ಜಗಳ ಬಿಡಿಸಿರುತ್ತಾರೆ. ಆಗ ಆರು ಜನ ಆರೋಪಿಗಳು ತಮ್ಮ ಕೈಯಲ್ಲಿದ್ದ ದೊಣ್ಣೆ ಹಾಗೂ ಕಲ್ಲುಗಳನ್ನು ಅಲ್ಲೇ

ಬೀಳಿಸಿ, ನೀವು ಜಾಗವನ್ನು ಖಾಲಿ ಮಾಡದೇ ಹೋದರೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕ ಒಡ್ಡಿ ಹೋಗಿರುತ್ತಾರೆ.

ನಂತರ ಚಾಸಾ-04 ರವರು, ನನ್ನನ್ನು, ಪ್ರಾಸಾ-01 ಮತ್ತು 03 ರವರನ್ನು ಕುಶಾಲನಗರ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಗಾಗಿ ದಾಖಲುಮಾಡಿರುತ್ತಾರೆ. ಸದರಿ ದಿನ ನಾನು ಹೇಳಿಕೆ ಕೊಡದ ಸ್ಥಿತಿಯಲ್ಲಿ ಇರದೇ ಇದ್ದ ಕಾರಣ, ಪೊಲೀಸ್‌ರು ಎರಡು ದಿನಗಳ ನಂತರ ಬರುವುದಾಗಿ ತಿಳಿಸಿ ಹೋಗಿರುತ್ತಾರೆ. ಅಂತೆಯೇ ಎರಡು ದಿನಗಳ ನಂತರ ಆಸ್ಪತ್ರೆಗೆ ಬಂದು ನಮ್ಮ ಹೇಳಿಕೆಯನ್ನು ಪಡೆದುಕೊಂಡು ಹೋಗಿರುತ್ತಾರೆ. ನಂತರ ದಿನಾಂಕಃ 26.03.2018 ರಂದು ನ್ಯಾಯಾಧೀಶರು ಮುಂದೆ ಆರೋಪಿಗಳ ವಿರುದ್ಧ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಧೀಶರ ಮುಂದೆ ದ.ಪ್ರ.ಸಂ. ಕಲಂ 164 ಅಡಿಯಲ್ಲಿ ನೀಡಿದ ತನ್ನ ಹೇಳಿಕೆಯನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಲಕೋಟೆಯನ್ನು ತೆಗೆದು ನೋಡಲಾಗಿ ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯನ್ನು ನಿ.ಪಿ.02 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿ.ಪಿ.02(ಎ) ಎಂದು ಗುರುತಿಸಲಾಯಿತು.

ದಿನಾಂಕಃ 15.04.2017 ರಂದು ಆರೋಪಿತರು ಹರಿದ ನನ್ನ ನೈಟಿಯನ್ನು ಬೆಟ್ಟದಪುರ ಪೊಲೀಸ್ ಠಾಣೆಗೆ ಹಾಜರುಪಡಿಸಿದ್ದು ಅದನ್ನು ಅಮಾನತ್ತುಪಡಿಸಿಕೊಂಡು ಮಹಜರ್ ಜರುಗಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಆ ಸಂದರ್ಭದಲ್ಲಿ ಚಾಸಾ- 11 ಮತ್ತು 12 ರವರು ಸಹ ಮಹಜರ್ ಗೆ ಸಹಿ ಮಾಡಿರುತ್ತಾರೆ.

ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ ದೊಣ್ಣೆ, ಎರಡು ಕಲ್ಲುಗಳು ಹಾಗೂ ನೈಟಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ.01 ರಿಂದ 04 ಎಂದು ಗುರುತಿಸಲಾಯಿತು. ಆರೋಪಿಗಳು ಕೃತ್ಯ ಸ್ಥಳಕ್ಕೆ ಬಂದಿದ್ದ ಕಪ್ಪು ಬೊಲೇರೋ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳನ್ನು ಈ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ. ಕೆ.ಆರ್.ವಿ. ವಕೀಲರಿಂದಃ**

**ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ. ಹಾಗೂ ಪ್ರ.ವ.ನ್ಯಾ.ದಂ.**
**ಪಿರಿಯಾಪಟ್ಟಣ.**

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

ಸಿ ಸಿ ಸಂಃ **1021-2019**

| | | |
|---|---|---|
| ಸಾಕ್ಷಿಯ ಹೆಸರುಃ | ವೆಂಕಟೇಶ್ | ಪ್ರಾ.ಸಾಃ: 03 |
| ತಂದೆ/ಗಂಡನ ಹೆಸರುಃ | ರಾಮಚಂದ್ರ | ಚಾಸಾಃ: 04 |
| ವಯಸ್ಸುಃ | ವರ್ಷ 32 | ಪ್ರಮಾಣೀಕರಿಸಿದ ದಿಃ 21.01.2020 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಸೂಳೆಕೋಟೆ ಗ್ರಾಮ | ಪಿರಿಯಾಪಟ್ಟಣ ತಾಲ್ಲೂಕು |

**ಮುಖ್ಯ ವಿಚಾರಣೆಃ ಹಿಸಸಅ ರಿಂದಃ**

ಆರೋಪಿಗಳ ಪರಿಚಯವಿದೆ. ಪ್ರಾಸಾ-01 ನನ್ನ ಚಿಕ್ಕಮ್ಮ. ಚಾಸಾ-03 ಮತ್ತು ಚಾಸಾ-04 ನನ್ನ ಸಂಬಂಧಿಕರು. ಆರೋಪಿಗಳು ನನ್ನ ದೂರ ಸಂಬಂಧಿಕರು. ನಮಗೂ ಹಾಗೂ ಆರೋಪಿಗಳ ನಡುವೆ ಜಮೀನಿನ ವ್ಯಾಜ್ಯವಿರುತ್ತದೆ. ದಿನಾಂಕಃ 11.04.2017 ರಂದು ಮಃ12 ಗಂಟೆ ಸಮಯದಲ್ಲಿ ನಾನು, ಪ್ರಾಸಾ-01 ಮತ್ತು 03 ರವರು ಮನೆಯ ಬಳಿ ಮಾತನಾಡುತ್ತಾ ಕುಳಿತಿರುವಾಗ ಈ ಕೇಸಿನ ಆರೋಪಿಗಳು ಒಂದು ಕಪ್ಪು ಬೊಲೇರೋ ಜೀಪ್ ಸಂ. ಕೆಎ 12 ಎನ್8086 ನಲ್ಲಿ ನಮ್ಮ ಮನೆಯ ಬಳಿ ಬಂದು, 1 ಮತ್ತು 2 ನೇ ಆರೋಪಿಗಳು ಬೋವರ್ಸಿ ಮುಂಡೇರಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ, ಮನೆ ನಮಗೆ ಸೇರಿದ್ದು, ಮನೆಯನ್ನು ಖಾಲಿ ಮಾಡಿ ಎಂದು ಬೈದು, ಆಗ ಪ್ರಾಸಾ-01 ಹಾಗೂ ಪ್ರಾಸಾ-02 ರವರು ಸದರಿ ಜಾಗ ನಮಗೆ ಸೇರಿದು ಕೊರ್ಟ್ ನ ಮುಖಾಂತರ ಜಾಗ ನಮ್ಮದಾಗಿದ್ದು, ಈ ರೀತಿ ಯಾಕೆ ಬೈದು ಗಲಾಟೆ ಮಾಡುತ್ತಿದ್ದೀರಿ ನಾವೇಕೆ ಖಾಲಿ ಮಾಡಬೇಕು ಎಂದಿದ್ದಕ್ಕೆ 4 ನೇ ಆರೋಪಿ ದೊಣ್ಣೆಯಿಂದ ಪ್ರಾಸಾ-01 ರವರ ಬಲಗಾಲು ಹಾಗೂ ಬಲಕೈಗೆ ಹೊಡೆದು ಗಾಯಪಡಿಸಿರುತ್ತಾನೆ.

ನಾನು ಜಗಳವನ್ನು ಬಿಡಿಸಲು ಬಂದಾಗ 1 ರಿಂದ 3 ನೇ ಆರೋಪಿಗಳು ಕೈಗಳಿಂದ ನನ್ನನ್ನು ಹಿಡಿದು ಎಳೆದಾಡಿ ಕಾಲಿನಿಂದ ಹೊಟ್ಟೆಗೆ ಒದ್ದು, ತಿಪ್ಪೆಗುಂಡಿಗೆ ನೂಕಿರುತ್ತಾರೆ. ನಾನು ಎದ್ದು ಸುಧಾರಿಸಿಕೊಳ್ಳುವಾಗ 1 ಮತ್ತು 2 ನೇ ಆರೋಪಿಗಳು ನನ್ನ ಎದೆಯ ಭಾಗಕ್ಕೆ ಕೈ ಹಾಕಿ, ನಾನು ಧರಿಸಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಹರಿದು ಹಾಕಿ, ನನಗೆ ನಡುರಸ್ತೆಯಲ್ಲಿ ಮಾನಭಂಗ ಮಾಡಿರುತ್ತಾರೆ. ಆಗ ಚಾಸಾ-03 ರವರು ಅಲ್ಲಿಗೆ ಬಂದು ಈಗಾಗಲೇ ಆಕೆ ಅನಾರೋಗ್ಯದಿಂದ ಬೈಯುತ್ತಿದ್ದು ಆಕೆಗೆ ಯಾಕೆ ತೊಂದರೆ ಕೊಡುತ್ತಿದ್ದೀರಾ ಎಂದಿದ್ದಕ್ಕೆ ಅವರಿಗೂ ಸಹ 5 ಮತ್ತು 6 ನೇ ಆರೋಪಿಗಳು ಚಿಕ್ಕ ಕಲ್ಲುಗಳನ್ನು ತೆಗೆದು ಚಾಸಾ-03 ರವರಿಗೆ ಸೊಂಟ, ಕೈ , ಕಾಲು ಮತ್ತು ಬೆರಳಿಗೆ ಹೊಡೆದು ಗಾಯಪಡಿಸಿರುತ್ತಾರೆ.

ನಂತರ ನಾನು ಜಗಳನ್ನು ಬಿಡಿಸಲು ಬಂದಾಗ 3, 5 ಮತ್ತು 6 ನೇ ಆರೋಪಿಗಳು ಕೈಗಳಿಂದ ಅವರ ಶರೀರಕ್ಕೆ ಹೊಡೆದಿರುತ್ತಾರೆ. ಆಗ ಚಾಸಾ-5 ಮತ್ತು 06 ರವರುಗಳು ಬಂದು ಜಗಳ ಬಿಡಿಸಿರುತ್ತಾರೆ. ಆಗ ಆರು ಜನ ಆರೋಪಿಗಳು ತಮ್ಮ ಕೈಯಲ್ಲಿದ್ದ ದೊಣ್ಣೆ ಹಾಗೂ ಕಲ್ಲುಗಳನ್ನು ಅಲ್ಲೇ ಬೀಳಿಸಿ, ನೀವು

ಜಾಗವನ್ನು ಖಾಲಿ ಮಾಡದೇ ಹೋದರೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕ ಒಡ್ಡಿ ಹೋಗಿರುತ್ತಾರೆ.

ನಂತರ ನಾನು, ಪ್ರಾಸಾ-01 ಮತ್ತು 2 ರವರನ್ನು ಕುಶಾಲನಗರ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಗಾಗಿ ದಾಖಲುಮಾಡಿರುತ್ತಾರೆ. ಸದರಿ ದಿನ ಪ್ರಾಸಾ-02 ರವರು ಹೇಳಿಕೆ ಕೊಡದ ಸ್ಥಿತಿಯಲ್ಲಿ ಇರದೇ ಇದ್ದ ಕಾರಣ, ಪೊಲೀಸ್‌ರು ಎರಡು ದಿನಗಳ ನಂತರ ಬರುವುದಾಗಿ ತಿಳಿಸಿ ಹೋಗಿರುತ್ತಾರೆ. ಅಂತೆಯೇ ಎರಡು ದಿನಗಳ ನಂತರ ಆಸ್ಪತ್ರೆಗೆ ಬಂದು ನಮ್ಮ ಹೇಳಿಕೆಯನ್ನು ಪಡೆದುಕೊಂಡು ಹೋಗಿರುತ್ತಾರೆ.

ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ ದೊಣ್ಣೆ, ಎರಡು ಕಲ್ಲುಗಳು ಹಾಗೂ ನೈಟಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ.01 ರಿಂದ 04 ಎಂದು ಗುರುತಿಸಲಾಯಿತು. ಆರೋಪಿಗಳು ಕೃತ್ಯ ಸ್ಥಳಕ್ಕೆ ಬಂದಿದ್ದ ಕಪ್ಪು ಬೊಲೇರೋ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳನ್ನು ಈ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಕೆ.ಆರ್.ವಿ. ವಕೀಲರಿಂದಃ</u>**

**ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

**<u>ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**ಹೆಃಸಿ.ನ್ಯಾ. ಹಾಗೂ ಪ್ರ.ವ.ನ್ಯಾ.ದಂ.**
**ಪಿರಿಯಾಪಟ್ಟಣ.**